ಓ.ಎಸ್‌ಃ 187/2025

ಪಿ.ಡಬ್ಲ್ಯೂಃ 01

**<u>ದಿನಾಂಕಃ 25-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಮಾನ್ಯ ಎ.ಜಿ.ಪಿ. ರವರಿಂದಃ-</u>**

3. ನನ್ನ ಹೆಸರು ಉತಾರೆಯಲ್ಲಿ ಭಾಷಾಸಾಬ ಎಂದು ತಿದ್ದುಪಡೆ ಮಾಡಬೇಕೆಂದು ದಾವೆ ಸಲ್ಲಿಸಿರುತ್ತೇನೆ. ನನ್ನ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಭಾಷಾಸಾಬ ಹಾಗೂ ಹುಸೇನಸಾಬ ಎರಡು ಒಂದೇ ಹೆಸರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಆಧಾರ ಕಾರ್ಡನಲ್ಲಿ ಇತ್ತಿಚಿಗೆ ಭಾಷಾಸಾಬ ಇರುತ್ತದೆ ಮತ್ತು ಚುನಾವಣೆ ಗುರುತಿನ ಚೀಟಿಯಲ್ಲಿ ಭಾಷಾಸಾಬ ಎಂದು ಇರುತ್ತದೆ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಪಹಣಿ ಪತ್ರಿಕೆಯಲ್ಲಿ ಕಳೆದ 30-40 ವರ್ಷಗಳಿಂದ ಹುಸೇನಸಾಬ ಎಂದು ಇರುತ್ತದೆ ಎಂದರೆ ಸರಿ. 30-40 ವರ್ಷಗಳಿಂದ ಹುಸೇನಸಾಬ ಇರುವುದನ್ನು ಭಾಷಾಸಾಬ ಎಂದು ತಿದ್ದುಪಡೆ ಮಾಡಬೇಕೆಂದು ಕೇಳಿರುವುದಿಲ್ಲ ಎಂದರೆ ಸರಿ.

4. ನನ್ನ ತಂದೆ ಮರಣದ ನಂತರ ನನ್ನ ಹೆಸರು ವಾರಸಾದಲ್ಲಿ ಹುಸೇನಸಾಬ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಇನ್ನೊಬ್ಬ ಹುಸೇನಸಾಬ ಎಂದು ವ್ಯಕ್ತಿ ಇರುವುದಿಲ್ಲ. ನಾನು ಪಹಣಿ ಪತ್ರಿಕೆಯ ಆಧಾರದ ಮೇರೆಗೆ ತೆರಿಗೆ ಪಾವತಿಸಿರುತ್ತೇನೆ ಎಂದರೆ ಸರಿ. ನನ್ನ ಎಲ್ಲಾ ಸರ್ಕಾರಿ ದಾಖಲಾತಿಯಲ್ಲಿ ಹುಸೇನಸಾಬ ಎಂದು ಸರಿಯಾಗಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ಕಾರದ ವಿರುದ್ಧ ದಾವೆ ಸಲ್ಲಿಸುವ ಮುಂಚೆ ನೋಟಿಸ ನೀಡಿರುವುದಿಲ್ಲ. ನನ್ನ ಹೆಸರು ಹುಸೇನಸಾಬ ಎಂದು ಸರಿಯಾಗಿ ಇದ್ದರು ಸಹ ಭಾಷಾಸಾಬ ಎಂದು ಉದ್ದೇಶ ಪೂರ್ವಕವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**

**ದಿವಾಣಿ ನ್ಯಾಯಾಧೀಶರು ಮತ್ತು**

**ನ್ಯಾಯಿಕ ದಂಡಾಧಿಕಾರಿಗಳು**

**ಬಸವನ ಬಾಗೇವಾಡಿ.**